ಎಲ್ಲರಿಗೂ ಶಿಕ್ಷಣ | ಹಾದಿಯುದ್ದಕ್ಕೂ ಸವಾಲುಗಳು

ಹೃದಯಕಾಂತ್ ದಿವಾನ್

ಎಲ್ಲರಿಗೂ ಶಿಕ್ಷಣದ ಕಲ್ಪನೆ, ಎಲ್ಲರೂ ಓದಲು ಮತ್ತು ಬರೆಯಲು ಕಲಿಯುವುದನ್ನು ಖಾತ್ರಿಪಡಿಸಿಕೊಳ್ಳುವುದು, ಎಲ್ಲಾ ಆಕರಗಳನ್ನೂ ಕಲ್ಪಿಸುವುದು ಮತ್ತು ಶಿಕ್ಷಣದ ಆಯ್ಕೆಗಳು ಎಂಬುವು ತೀರಾ ಇತ್ತೀಚಿನ ವಿದ್ಯಮಾನ. ಇದು ಎಲ್ಲಾ ಮನುಷ್ಯರನ್ನು ಗೌರವಿಸುವ, ಸಮಾನತೆಯ ಪ್ರಜ್ಞೆಯಿಂದ ಪರಿಗಣಿಸುವ ಸಮಾಜವನ್ನು ನಿರ್ಮಿಸುವ ಚಳುವಳಿಯ ಒಂದು ಭಾಗವಾಗಿದೆ. ಈ ಚಳುವಳಿಯು ಆರಂಭವಾಗಿ ಒಂದು ಶತಮಾನವೂ ಕಳೆದಿಲ್ಲ. ಅಲ್ಲದೆ ಇದು ಇನ್ನೂ ಕೂಡ ವಿಶ್ವದ ಹೆಚ್ಚಿನ ಭಾಗವನ್ನು ಒಳಗೊಂಡಿಲ್ಲ. ನೀತಿಗಳು, ಅಂತರರಾಷ್ಟ್ರೀಯ ಒಪ್ಪಂದಗಳು ಮತ್ತು ಘೋಷಣೆಗಳ ಹೊರತಾಗಿಯೂ, ಎಲ್ಲರಿಗೂ ಶಿಕ್ಷಣದ ಪರಿಕಲ್ಪನೆಯನ್ನು ಕಡ್ಡಾಯಗೊಳಿಸಲಾಗಿರುವ ಪ್ರದೇಶಗಳಲ್ಲೂ ವ್ಯಾಪಕವಾಗಿ ಅಂಗೀಕರಿಸಲ್ಪಟ್ಟ ಸಿದ್ಧಾಂತವಾಗಿಲ್ಲ.

ಸಾಮಾಜಿಕ ಶ್ರೇಣಿಗಳ ಪಾಲನೆ

ಸಮಾಜದ ಎಲ್ಲ ಸದಸ್ಯರಿಗೆ ಮಹತ್ವಾಕಾಂಕ್ಷೆಯುಳ್ಳ ಅವಕಾಶಗಳನ್ನು ಒದಗಿಸುವ ಈ ಸೂಕ್ಷ್ಮ ಚಿಂತನೆಯು, ಐತಿಹಾಸಿಕವಾಗಿ ಪಸರಣಗೊಂಡ ಬಹುಪಾಲು ಜನರ ಕುರಿತಾದ ಅನ್ಯಾಯದ ನಡವಳಿಕೆ ಮತ್ತು ಅವಕಾಶಗಳ ಕೊರತೆಯ ಕಾರಣದಿಂದ ಬೃಹತ್ತಾಗಿ ಹೊರಹೊಮ್ಮಿದೆ. ಒಂದಲ್ಲ ಒಂದು ಸ್ವರೂಪದಲ್ಲಿ ಮಕ್ಕಳಿಗೆ ಶಿಕ್ಷಣ ಒದಗಿಸುವ ವಿಚಾರವು ಹಿಂದಿನ ಹಲವು ಸಮಾಜಗಳ ಭಾಗವಾಗಿದ್ದಿರಬಹುದು. ಆದರೆ ಬಹುತೇಕವಾಗಿ ಎಲ್ಲ ಮಕ್ಕಳಿಗೆ ಒದಗಿಸಿದ ಶಿಕ್ಷಣವು ಒಂದೇ ತೆರನಾಗಿರಲಿಲ್ಲ ಮತ್ತು ಕಡ್ಡಾಯವಾಗಿರಲಿಲ್ಲ. ಹಲವೆಡೆಗಳಲ್ಲಿ ಬೇರೆಬೇರೆ ಹಿನ್ನೆಲೆಯಿಂದ ಬಂದಂತಹ ಮಕ್ಕಳಿಗೆ ಬೇರೆಬೇರೆ ರೀತಿಯ ಶಾಲೆಗಳಿದ್ದವು. ಹಾಗೆಯೇ ಅವರ ಪಠ್ಯಕ್ರಮದ ನಿರೀಕ್ಷೆಗಳು ಮತ್ತು ವಿಧಾನಗಳು ಬೇರೆ ಬೇರೆಯಾಗಿದ್ದವು. ಈ ಶಾಲೆಗಳ ನೀತಿ ಮತ್ತು ಶಾಲೆಗಳಿಗೆ ಮಾರ್ಗದರ್ಶನ ನೀಡುವ ವಿಶಾಲ ತತ್ತ್ವವು ಬಹುತೇಕ ಅಂದಿನ ಸಾಮಾಜಿಕ ಸಂಬಂಧಗಳು ಮತ್ತು ಸಾಮಾಜಿಕ ಕ್ರಮವನ್ನು ಪೋಷಿಸುವ ನಿಟ್ಟಿನಲ್ಲಿದ್ದವು. 18ನೇ ಶತಮಾನದಲ್ಲಿ ಒಂದನೇ ಜ಼ಾರ್ ನಿಕೋಲಸ್‌ನ ಹೇಳಿಕೆಯು ಇದನ್ನೇ ಅತ್ಯುತ್ತಮವಾಗಿ ಸಂಗ್ರಹ ರೂಪದಲ್ಲಿ ಹೇಳುತ್ತದೆ.

'ಪ್ರತಿ ಶಾಲೆಯಲ್ಲಿ ಬೋಧನೆಯ ವಿಷಯಗಳು ಮತ್ತು ಬೋಧನಾ ವಿಧಾನಗಳು ವಿದ್ಯಾರ್ಥಿಗಳ ಭವಿಷ್ಯದ ಗುರಿಗೆ ತಕ್ಕಂತೆ ಇರಲೇ-ಬೇಕಾದದ್ದು ಅತ್ಯಗತ್ಯ. ಅದು ಯಾರೂ ತಲುಪಲಾಗದಂಥ ಆತನ ಮೇರು ಗುರಿಯಾಗಿರುತ್ತದೆ'.

ಅನ್ಯಾಯದ ಸಾಮಾಜಿಕ ವ್ಯವಸ್ಥೆಯನ್ನು ಕಾಪಾಡುವ ಹೇಳಿಕೆಯಲ್ಲಿ ಅಂತರ್ಗತವಾದ ಸಿದ್ಧಾಂತವು ಸಾಮಾಜಿಕ ಶ್ರೇಣೀಕರಣ ಮತ್ತು ಸ್ಥಿತಿಗತಿಗಳನ್ನು ಉಳಿಸಿಕೊಳ್ಳಲು ಪ್ರಯತ್ನಿಸುವ ಸಾಮಾಜಿಕ ಚಲನಶೀಲತೆಯನ್ನು ಅನುಮತಿಸುವ ಮತ್ತು ಬಯಸುವ ವ್ಯವಸ್ಥೆಗಿಂತ ಈ ಶಿಕ್ಷಣದ ಚಿಂತನೆಯು ಭಿನ್ನವಾಗಿದೆ. ಇದು ಇತ್ತೀಚಿನ ಕೆಲವು ಸೈದ್ಧಾಂತಿಕ ನಿಲುವುಗಳಿಗೆ ಸಂಪೂರ್ಣವಾಗಿ ವಿರುದ್ಧವಾಗಿದೆ. ಉದಾಹರಣೆಗೆ, ತೀರಾ ಇತ್ತೀಚೆಗೆ ರೂಪಿಸಲಾಗಿರುವ, ಅಮರ್ತ್ಯ ಸೇನ್ ಅವರು ಮುಖ್ಯವಾಗಿ ಪ್ರತಿಪಾದಿಸಿದ ಮಾನವ ಸಾಮರ್ಥ್ಯದ ಸಿದ್ಧಾಂತವು (Human capability theory), ಮಕ್ಕಳು ತಮಗೆ ಬೇಕಾದ ಪಾತ್ರದಲ್ಲಿ ಸಮಾಜದ ಭಾಗವಾಗಿರಲು ಆರಿಸುವಂತಿರುವ ಮತ್ತು ಇರುವ ಎಲ್ಲ ಸಾಧ್ಯತೆಗಳನ್ನು ಅರಿತು ಅವುಗಳಲ್ಲಿ ಯಾವುದರಲ್ಲಾದರೂ ಶಕ್ತರೆಂಬ ಭಾವನೆಯನ್ನು ಹೊಂದುವ ರೀತಿಯಲ್ಲಿ ಶಿಕ್ಷಣವು ಮಕ್ಕಳ ಸಾಮರ್ಥ್ಯಗಳನ್ನು ಮತ್ತು ಆಕಾಂಕ್ಷೆಗಳನ್ನು ನಿರ್ಮಿಸುವ ಮಾರ್ಗವಾಗಿದೆ ಎಂದು ಹೇಳುತ್ತದೆ. ಶಿಕ್ಷಣದ ಈ ನಿರೀಕ್ಷೆಯು ಶಿಕ್ಷಣದ ಹಕ್ಕು ಮತ್ತು ಅಂತರರಾಷ್ಟ್ರೀಯ ಒಪ್ಪಂದಗಳು ಒದಗಿಸುವುದಕ್ಕಿಂತ ಬಹಳ ಹೆಚ್ಚಿನದಾಗಿದೆ. ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ಸಾಕಷ್ಟು ಹೋರಾಟದ ಪ್ರತಿಫಲವಾಗಿದ್ದು, ಇನ್ನೂ ಕೂಡ ಅದನ್ನು ಕಾರ್ಯಗತಗೊಳಿಸುವ ಬದ್ಧತೆಯಲ್ಲಿ ಬಹಳಷ್ಟು ಅಂತರವಿದೆ. ಉದಾಹರಣೆಗೆ, ಮಾನವ ಸಾಮರ್ಥ್ಯದ ಚೌಕಟ್ಟು (Human capability framework) ಒದಗಿಸುವಂತೆ ಶಿಕ್ಷಣದ ಗುರಿ ಮತ್ತು ಉದ್ದೇಶಗಳನ್ನು ಅದು ಸ್ಪಷ್ಟವಾಗಿ ಸೂಚಿಸುವುದಿಲ್ಲ. ಆದ್ದರಿಂದ, ಹೀಗೆ ಎಲ್ಲಾ ಸಮಾಜಗಳು, ಕೆಲವು ರೀತಿಯಲ್ಲಿ ತಾತ್ತ್ವಿಕ ಸಿದ್ಧಾಂತಗಳು, ಗುರಿಗಳು ಮಕ್ಕಳು ಶಿಕ್ಷಣ ಪಡೆಯಬೇಕೆಂದು ಬಯಸಿದರೆ, ಆಶಯ ಮತ್ತು ಕಣ್ಣಿಗೆ ಕಾಣುವ ಕಾರ್ಯವಿಧಾನಗಳು ಬಹಳ ಭಿನ್ನವಾಗಿರಬಹುದು. ಹೀಗಾಗಿ ಎಲ್ಲಾ ಮಕ್ಕಳು ಏಕೆ ಶಿಕ್ಷಿತರಾಗಬೇಕೆಂದು ಎಲ್ಲಾ ಸಮಾಜಗಳು ಬಯಸುತ್ತವೆ ಮತ್ತು ಯಾವ ಶಿಕ್ಷಣ ಅವರಿಗೆ ಸೂಕ್ತ ಎಂಬುದರ ಬಗ್ಗೆ ನಾವು ಯೋಚಿಸಬೇಕಾಗಿದೆ.

ಎಲ್ಲಾ ಮನುಜರ ಮಕ್ಕಳು ಸಮಾಜದಿಂದ ಕಲಿಯುತ್ತಾರೆ ಮತ್ತು ಅವರಿಗೆ ಕಲಿಯುವ ಸಾಮರ್ಥ್ಯವಿದೆ ಎನ್ನುವುದು ಸುಸ್ಪಷ್ಟವಾಗಿದ್ದು, ಇಲ್ಲಿ ಮಾನವ ಅಭಿವೃದ್ಧಿ ಮತ್ತು ಸಾಮಾಜೀಕರಣದ ಭಾಗವೂ ಆಗಿದೆ. ಮಾನವ ತಿಳುವಳಿಕೆಯು ಹೆಚ್ಚಿದಂತೆ ಕುಟುಂಬವು ಒದಗಿಸುವ ಶಿಕ್ಷಣದ ಅವಕಾಶಕ್ಕಿಂತ ಶಿಕ್ಷಣದ ಅಗತ್ಯವು ಹೆಚ್ಚಿತು. ಇದರಿಂದ ಶಿಕ್ಷಕರ ಅಗತ್ಯವು ತಲೆದೋರಿ, ಮಕ್ಕಳಿಗೆ ಕಲಿಸಲು ಸಿದ್ಧರಾಗುವುದಕ್ಕೆ ಶಿಕ್ಷಕರಿಗಾಗಿ ಕೆಲವು ಸಂಘಟಿತ ವೇದಿಕೆಗಳು ಮತ್ತು ರಚನೆಗಳು ಸೃಷ್ಟಿಯಾದವು. ಇದರ ಪರಿಣಾಮವಾಗಿ ಬೇರೆಬೇರೆ ಸಮಾಜಗಳು ಮತ್ತು ಸಮುದಾಯಗಳಲ್ಲಿ ಬೇರೆಬೇರೆ ರೀತಿಯ ಶಾಲೆಗಳು ಅಸ್ತಿತ್ವಕ್ಕೆ ಬಂದವು. ಈ ಶಿಕ್ಷಕರು ಮತ್ತು ಸಂಘಟಿತ ವೇದಿಕೆಗಳು ಇಂದಿನ ಶಾಲೆಗಳ ಸ್ವರೂಪಕ್ಕಿಂತ ಬಹಳ ಭಿನ್ನವಾಗಿದ್ದವು. ಇವುಗಳು ರಾಜ್ಯದ ಧನಸಹಾಯ ಪಡೆದಿರಲಿಲ್ಲ ಅಥವಾ ಅವುಗಳಿಂದ ನಿರ್ವಹಿಸಲ್ಪಟ್ಟಿರಲಿಲ್ಲ. ಹಾಗೆಯೇ ಈ ಶಿಕ್ಷಣವು ಎಲ್ಲರಿಗೂ ಲಭ್ಯವಿರಲಿಲ್ಲ ಮತ್ತು ಎಲ್ಲ ಜನರ ಪರವಾಗಿ ಕೂಡ ಇರಲಿಲ್ಲ. ಇದು ಹೆಚ್ಚಾಗಿ ಶ್ರೀಮಂತರ ಅಥವಾ ಉಳ್ಳವರ ಒಳಿತಿಗಾಗಿ ಮತ್ತು ರಾಜ್ಯದ ನಿರ್ವಹಣೆಗಾಗಿ ನಡೆಯುತ್ತಿತ್ತು.

ಆ ಸಮಯದಲ್ಲಿ ಶಿಕ್ಷಣದ ಪ್ರಕ್ರಿಯೆಗಳು ಮೌಖಿಕ ಸಂವಹನದ ಮೂಲಕ ನಡೆಯುತ್ತಿತ್ತು. ಅದು ಆ ಸಮುದಾಯಗಳು ಅವಲಂಬಿಸಿದ್ದ ನಿಯಮ, ನಿಬಂಧನೆ, ರೂಢಿ ಮತ್ತು ಆಚರಣೆಗಳ ಸಾರವನ್ನು ಒಳಗೊಂಡಿತ್ತು. ಬದುಕು ಮತ್ತು ಅಸ್ತಿತ್ವದ ಕುರಿತ

ದೃಷ್ಟಿಕೋನ, ಒಂದು ಗ್ರಹಿಕೆಯ ಬೆಳವಣಿಗೆಯನ್ನು ಕೂಡಾ ಅಲ್ಲಿ ಬೋಧಿಸಲಾಗುತ್ತಿದ್ದ ಧಾರ್ಮಿಕ ಪಠ್ಯಗಳು ಒಳಗೊಂಡಿದ್ದವು. ಇದು ಬೋಧಿಸಲ್ಪಟ್ಟ ನಡವಳಿಕೆ ಮತ್ತು ಆಚರಣೆಗಳ ರೀತಿಯಲ್ಲಿ ಹುದುಗಿತ್ತು. ಇದರ ಜೊತೆಗೆ, ಪ್ರಕೃತಿಯ ಬಗ್ಗೆ ತಿಳುವಳಿಕೆ, ತರ್ಕದ ನಿಯಮಗಳು, ವಿಜ್ಞಾನ, ವ್ಯಾಪಾರ ಮತ್ತು ಕರಕುಶಲ ಕಲೆ, ಅಲ್ಲದೆ, ಅಂದು ಲಭ್ಯವಿಧ್ಯ ವೈದ್ಯಕೀಯ ತಿಳುವಳಿಕೆಯನ್ನು ಕೂಡಾ ಬೋಧಿಸಲಾಗುತ್ತಿತ್ತು. ಬಹಳಷ್ಟು ವಿಷಯಾಂಶ ತತ್ವಗಳು ಒಂದೇ ರೀತಿಯಾಗಿದ್ದರೂ ಕೂಡ, ಇವುಗಳನ್ನು ಕಲಿಸುವ ರೂಪಗಳು ಮತ್ತು ರಚನೆಗಳಲ್ಲಿ ಭಿನ್ನತೆಯಿತ್ತು. ಆದರೆ ಅಲ್ಲಿ ಎಲ್ಲಾ ಮಕ್ಕಳು ಈ ಜ್ಞಾನ ಅಥವಾ ಇತರೆ ಯಾವುದೇ ಜ್ಞಾನದಲ್ಲಿ ಔಪಚಾರಿಕವಾಗಿ ಶಿಕ್ಷಿತರಾಗಬೇಕೆಂಬ ಕಡ್ಡಾಯ ನಿಯಮವಿರಲಿಲ್ಲ.

ಸಮಾಜಗಳು ಬೆಳೆದಂತೆ, ಶಾಲೆಗಳ ಸ್ವರೂಪ, ಅವು ಹೇಗೆ ಕಾರ್ಯ-ನಿರ್ವಹಿಸುತ್ತಿದ್ದವು ಮತ್ತು ಅಲ್ಲಿ ಕಲಿಸಲ್ಪಟ್ಟ ವಿಷಯಗಳಲ್ಲಿಯೂ ಹೇಗೆ ಬದಲಾವಣೆಗಳು ಬಂದವು ಎಂದು ನಾವು ಹೇಳಬಹುದು. ಇಂದಿನ ಪರಿಸ್ಥಿತಿಗೆ ನಾವು ತುಲನಾತ್ಮಕವಾಗಿ ಹತ್ತಿರವಾಗುತ್ತಿದ್ದಂತೆ, ಸುಮಾರು 15ನೇ ಶತಮಾನದಲ್ಲಿ ಶಿಕ್ಷಣವು, ಒಂದಲ್ಲ ಒಂದು ರೀತಿಯ ಆಧ್ಯಾತ್ಮಿಕ ಮತ್ತು ಧಾರ್ಮಿಕ ಸ್ಥಳಗಳೊಂದಿಗೆ ಸಂಬಂಧಿಸಿದ ಸಂಸ್ಥೆಗಳ ನೇತೃತ್ವದಲ್ಲಿ ಪ್ರಾರಂಭವಾಯಿತು. (ಉದಾಹರಣೆಗೆ, ಆಶ್ರಮ ಶಾಲೆಗಳು, ಮದರಸಾಗಳು, ಕಾನ್ವೆಂಟ್‌ಗಳು, ಮಠಗಳು). ಇವೆಲ್ಲವೂ ಆಧ್ಯಾತ್ಮಿಕ ಒಲವಿರುವ ರಚನೆಗಳಾಗಿದ್ದು, ಸಂಘಟಿತ ಸಂಸ್ಥೆಗಳ ಭಾಗವಾಗಿರಲಿಲ್ಲ ಮತ್ತು ಅನೇಕ ಸಮಾಜಗಳಲ್ಲಿ ಇವುಗಳನ್ನು ಶಿಕ್ಷಕರು ವೈಯಕ್ತಿಕವಾಗಿ ನಡೆಸುತ್ತಿದ್ದರು. ಏನನ್ನು ಕಲಿಯಬೇಕೆಂದು ನಿರೀಕ್ಷಿಸಲಾಗಿತ್ತು, ಮತ್ತು ಯಾವುದನ್ನು ಕಲಿಸಲಾಗುತ್ತಿತ್ತು ಮತ್ತು ಹೇಗೆ ಮೌಲ್ಯಮಾಪನ ಮಾಡಲಾಗುತ್ತಿತ್ತು ಎಂಬುವುದು ಸಮಾಜದಿಂದ ಸಮಾಜಕ್ಕೆ ಮತ್ತು ಸಂಸ್ಥೆಯಿಂದ ಸಂಸ್ಥೆಗೆ ಭಿನ್ನವಾಗಿತ್ತು.

ನಿಗದಿತ ಸಮಯವನ್ನು ಹೊಂದಿರುವ ಕೆಲಸದ ಸ್ಥಳಗಳಲ್ಲಿ ಕಾರ್ಯನಿರ್ವಹಿಸಲು ಪೋಷಕರಿಗೆ ಅವಕಾಶವನ್ನು ಒದಗಿಸುವ ಅಗತ್ಯತೆಯಿಂದಾಗಿ ಮತ್ತು ಅಲ್ಲಿನ ಕೆಲಸಗಾರರಿಗೆ ನಿರ್ದಿಷ್ಟ ಸಮಯ ಮತ್ತು ಕೆಲಸದ ಸ್ವರೂಪದಲ್ಲಿ ಶಿಸ್ತನ್ನು ಪಾಲಿಸುವುದು ಮುಖ್ಯವಾದಾಗ, ಎಲ್ಲಾ ಮಕ್ಕಳನ್ನು ಶಿಕ್ಷಣದ ಪ್ರಕ್ರಿಯೆಯಲ್ಲಿ ಸೇರಿಸುವ ಪ್ರಶ್ನೆಯು ಸಮಾಜದಲ್ಲಿ ಉದ್ಭವಿಸಿತು. ಇದರ ಜೊತೆಗೆ ಕೆಲವು ಕೌಶಲ್ಯಗಳು ಕೂಡ ಅಗತ್ಯವಾಗಿದ್ದವು. ಉದಾಹರಣೆಗೆ, ಮಗುವು ಸೂಚನೆಗಳನ್ನು ಅನುಸರಿಸಬೇಕಾಗಿರುವುದು ಕೂಡ ಒಂದು ಅಗತ್ಯವಾಗಿತ್ತು. ಆದ್ದರಿಂದ, ಯೋಧರ ತರಬೇತಿ ಮತ್ತು ಸಾಮಾಜಿಕ ಮಹಿಳೆಯಾಗಲು ಮೇಲ್ವರ್ಗದ ಹುಡುಗಿಯರ ತರಬೇತಿಯಂತೆಯೇ, ಈಗ ಇತರೆ ಹಿನ್ನೆಲೆಯಿಂದ ಬರುವ ಮಕ್ಕಳನ್ನು ಶಾಲೆಗೆ ಸೇರಿಸಲು ಕಾರಣವಾಗಿತ್ತು. ಎಲ್ಲಾ ಮಕ್ಕಳು ಕಲಿಯಬಹುದೇ ಎಂಬುದು ಬಿಸಿಬಿಸಿ ಚರ್ಚೆಯ ವಿಷಯವಾದರೂ ವ್ಯಾಪಕತೆಯನ್ನು ಒಳಗೊಳ್ಳುವತ್ತ ಶಿಕ್ಷಣವು ವಿಸ್ತರಿಸಿತು. ಒಂದಲ್ಲ ಒಂದು ರೀತಿಯಲ್ಲಿ ಎಲ್ಲಾ ಮಕ್ಕಳಿಗೆ ಕಲಿಸಬಹುದೆಂದು ನಂಬಿದ ಕೆಲವರು ಮತ್ತು ಇದು ಸಾಧ್ಯವಿಲ್ಲ ಎಂದು ಭಾವಿಸಿದ್ಧ ಅನೇಕರ ನಡುವಿನ ಸಂಘರ್ಷ ಮುಂದುವರೆಯಿತು. ಗುಲಾಮನಾದ ಹುಡುಗನಿಗೆ ಕಲಿಸುವ ಸಾಕ್ರಟಿಸ್‌ನ ಕಥೆಯಿಂದ ಇದು ಸ್ಪಷ್ಟವಾಗಿದೆ. ಇದೇ ರೀತಿ ಇಂಗ್ಲಿಷ್ ಪ್ರಾಧ್ಯಾಪಕನೊಬ್ಬ ಬೇರೆ ಹಿನ್ನೆಲೆಯಿಂದ ಬಂದ ಒಬ್ಬ ಹುಡುಗಿಯನ್ನು ಮೇಲ್ವರ್ಗದ ಮಹಿಳೆಯಾಗಲು ಮತ್ತು ಅದರಂತೆಯೇ ನಡೆದುಕೊಳ್ಳಲು ಕಲಿಸುವ ಚಲನಚಿತ್ರವು (My Fair Lady) ಸಮನ್ವಯತೆಯ ವಿಚಾರದ ಬಗ್ಗೆ ಸಾಮಾಜಿಕ ಪ್ರಜ್ಞೆಯಿಂದ ನಡೆಯುತ್ತಿರುವ ಹೋರಾಟದ ಪ್ರತಿಬಿಂಬವಾಗುತ್ತದೆ.

ಆದಾಗ್ಯೂ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ವಂಚಿತರಾದ ಮಕ್ಕಳು ತೋರಿಸಿದ ಕಲಿಕಾ ಸಾಮರ್ಥ್ಯ, ವಿಜ್ಞಾನ ಮತ್ತು ಗಣಿತವನ್ನು ಕಲಿಯುವಲ್ಲಿ ಹುಡುಗಿಯರು ತೋರಿಸಿದ ಸಾಮರ್ಥ್ಯ ಹಾಗೂ ಇತರ ಇಂತಹುದೇ ಉದಾಹರಣೆಗಳು, ವ್ಯವಸ್ಥೆಯು ಕ್ರಮೇಣ ಅವರನ್ನು ಕನಿಷ್ಠ ದಾಖಲೆಯಲ್ಲಾದರೂ ಸಮಾನರೆಂದು ಅಂಗೀಕರಿಸಲು ಒತ್ತಾಯಿಸಿವೆ. ಆದರೂ, ಆಚರಣೆ ಹಾಗೂ ಆಲೋಚನೆಯಲ್ಲಿ, ವಂಚಿತ ಮಕ್ಕಳು ಮತ್ತು ಹುಡುಗಿಯರು ಕೆಳಮಟ್ಟದವರಾಗಿದ್ದು, ಅಮೂರ್ತ ಮತ್ತು ಸಂಕೀರ್ಣ ವಿಚಾರಗಳನ್ನು ಕಲಿಯಲು ಅಸಮರ್ಥರು ಎಂಬುದಾಗಿ ಪುರಾವೆಗಳನ್ನು ಹುಡುಕಿ, ಸಂಶೋಧಿಸಿ ಐತಿಹ್ಯಗಳಿಂದ ಆಯ್ದು ವಾದಿಸುವ ಪ್ರಯತ್ನಗಳು ಮುಂದುವರಿಯುತ್ತವೆ. ಹಿಂದಿನ ಕರ್ಮ ಅಥವಾ ಈಗಿರುವ ಸಾಧ್ಯತೆ ಮತ್ತು ಸಾಮರ್ಥ್ಯವನ್ನು ಉಲ್ಲೇಖಿಸಿ ಕೂಡ ಅಸಮಾನ ನಡವಳಿಕೆಯನ್ನು ನಿರ್ಣಾಯಕವಾಗಿ ಸಮರ್ಥಿಸುವ ಬಹಳಷ್ಟು ಪ್ರಯತ್ನಗಳು ಇಂದಿಗೂ ನಡೆಯುತ್ತಿವೆ.

ಕೊನೆಯಲ್ಲಿ, ಮಾನವರ ಸಮಾನತೆಯನ್ನು ನಂಬಿದವರ ವಕಾಲತ್ತು ಮತ್ತು ಅಂತರ್ಗತ ತುಲನೀಯ ಅಸಮರ್ಥತೆಯ ವಿರುದ್ಧ ಅಗಾಧ ಪುರಾವೆಗಳು ಸಮಾಜದ ನೀತಿ ನಿರೂಪಣೆಯಲ್ಲಿ ಬದಲಾವಣೆಯನ್ನು ತಂದಿತು. ಎಲ್ಲಾ ಮಕ್ಕಳು ಶಿಕ್ಷಣವನ್ನು ಪಡೆಯುವ ಅಗತ್ಯವಿಲ್ಲ ಎಂಬ ಪ್ರಮೇಯವನ್ನು ಆಧರಿಸಿದ ಚೌಕಟ್ಟು ಮತ್ತು ಅದರಲ್ಲೂ ಬಹುತೇಕ ಮಕ್ಕಳು ಕಲಿಕೆಯ ಸಾಮರ್ಥ್ಯವನ್ನು ಹೊಂದಿಲ್ಲ ಎಂಬ ವಿಚಾರಕ್ಕೆ ಭಾರೀ ಪೆಟ್ಟು ಬಿದ್ದಿತು.

ಮೇಲೆ ಸೂಚಿಸಿದಂತೆ, ಹೊರಗುಳಿದ ಮಕ್ಕಳಲ್ಲಿ ಹೆಣ್ಣುಮಕ್ಕಳು ಒಂದು ಪ್ರಮುಖ ಭಾಗವಾಗಿದ್ದರು. ಕೇವಲ ಶಿಕ್ಷಣ ಮಾತ್ರವಲ್ಲ, ಹಿರಿಯ ಅಥವಾ ಉನ್ನತ ಸ್ಥಾನಗಳಾಗಲೀ ಮತ್ತು ಸಂಶೋಧನಾ ನಾಯಕರಾಗಲೀ ಬಹುತೇಕ ಎಲ್ಲ ಕಡೆಗಳಲ್ಲೂ ಅವರನ್ನು ಹೊರಗುಳಿಯುವಂತೆ ಮಾಡಲಾಗಿತ್ತು. ಅವರಲ್ಲಿ ವಿದ್ಯಾವಂತರಾದ ಕೆಲವರು, ಹೆಣ್ಣುಮಕ್ಕಳ ಶಿಕ್ಷಣದ ಸೀಮಿತ ಚೌಕಟ್ಟಿನಲ್ಲಿ ಶಿಕ್ಷಣ ಪಡೆದರೇ ಹೊರತು ಎಲ್ಲಾ ಮಕ್ಕಳಿಗೆ ಅನ್ವಯಿಸುವ ಮತ್ತು ಸಾರ್ವತ್ರಿಕ ಕಾರ್ಯಕ್ರಮದ ಮೂಲಕ ಶಿಕ್ಷಣ ಪಡೆಯಲಿಲ್ಲ. ಎಲ್ಲಾ ಹೆಣ್ಣು-ಮಕ್ಕಳನ್ನು ಸಾರ್ವತ್ರಿಕ ಶಿಕ್ಷಣ ಕಾರ್ಯಕ್ರಮಗಳಲ್ಲಿ ಸೇರ್ಪಡೆಗೊಳಿಸಲು ಮತ್ತು ಅವರನ್ನು ಗಣಿತ, ವಿಜ್ಞಾನ, ಎಂಜಿನಿಯರಿಂಗ್ ಇತ್ಯಾದಿ ವಿಷಯಗಳನ್ನು ಕಲಿಯಲು ನಿರೀಕ್ಷಿಸುವುದು ಈಗಲೂ ವ್ಯಾಪಕವಾಗಿ ಅಂಗೀಕಾರವಾಗಿಲ್ಲ. ಅವರಿಗೆ ಶಿಕ್ಷಣ ನೀಡುವ ಮತ್ತು ಅವರು ಶಿಕ್ಷಿತರಾಗುವುದನ್ನು ಸಾಧ್ಯವಾಗುವಂತೆ ಮಾಡುವ ಜವಾಬ್ದಾರಿಯನ್ನು ಹೊಂದಿರುವವರೂ ಕೂಡ ಇದನ್ನು ಇನ್ನೂ ಒಪ್ಪಿಲ್ಲ.

ಹೀಗಾಗಿ, ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಎಲ್ಲಾ ಮಕ್ಕಳನ್ನು ಸೇರ್ಪಡೆಗೊಳಿಸುವ ಈ ಪ್ರಯತ್ನದಲ್ಲಿ ರಾಜ್ಯದ ಜವಾಬ್ದಾರಿ ಮತ್ತು ಜನಸಾಮಾನ್ಯರ ಪಾತ್ರವನ್ನು ಗುರುತಿಸಬೇಕು. ಶಿಕ್ಷಣವೂ ವೆಚ್ಚದಾಯಕವಾದದ್ದು: ಅಂದರೆ ಶಾಲಾ ವೆಚ್ಚಗಳು, ಮಗುವನ್ನು ಶಾಲೆಗೆ ಕಳುಹಿಸಲು ಕುಟುಂಬಕ್ಕೆ ತಗಲುವ ವೆಚ್ಚ, ಶಾಲೆಯ ನಂತರ ಮಗುವಿನ ಕಲಿಕೆಗೆ ಬೆಂಬಲ ನೀಡಲು ವೆಚ್ಚ ಮತ್ತು ಸಾಮರ್ಥ್ಯ ಇತ್ಯಾದಿ. ಅನೇಕ ಕುಟುಂಬಗಳಿಗೆ ಕಡಿಮೆ ಆದಾಯವಿರುವುದರಿಂದ ಅದು ಸಾಧ್ಯವಿಲ್ಲ. ಶಾಲೆಯ ನಂತರ ಕಲಿಯುವ ಮಕ್ಕಳನ್ನು ಕಳುಹಿಸುವ ಮತ್ತು ಬೆಂಬಲಿಸುವ ವೆಚ್ಚವನ್ನು ಪೂರೈಸಲು ಹಣ ಹೊಂದಿಸುವುದು ಅವರಿಗೆ ಬಹಳ ಕಷ್ಟ.

ನಾನು ಪ್ರಾರಂಭದಲ್ಲಿ ಹೇಳಿದಂತೆ, ಪ್ರತಿಯೊಬ್ಬರನ್ನೂ ಶಿಕ್ಷಿತರನ್ನಾಗಿಸುವ ವಿಧಾನದ ಬಗ್ಗೆ ಪ್ರಬಲ ತಿಳುವಳಿಕೆಯೆಂದರೆ ಅವರು ಸಮಾಜದ ಉಪಯುಕ್ತ ಸದಸ್ಯರಾಗಿರಬೇಕು ಮತ್ತು ಸ್ಥಿರ ಸಮಾಜವನ್ನು ರಚಿಸಲು ಸಹಾಯ ಮಾಡುವಂಥವರಾಗಬೇಕು. ಅಂದರೆ ಇಲ್ಲಿ ಪ್ರತಿಯೊಂದು ಮಗುವೂ ತನಗೆ ನಿರ್ಧರಿತವಾದ ಪಾತ್ರದ ಪ್ರಕಾರ ಶಿಕ್ಷಣ ಪಡೆಯಬೇಕೆಂಬ ಇಂಗಿತವಿದೆ.

ಹೊಸ ಮೇಲ್ವರ್ಗದ ಸೃಷ್ಟಿ

ಸಮಾಜದ ಪ್ರಜಾಪ್ರಭುತ್ವೀಕರಣ, ಕೈಗಾರಿಕೀಕರಣ ಮತ್ತು ಅವಕಾಶಗಳ ಮಂಥನವು ಸಮಾಜದಲ್ಲಿ ಶಿಕ್ಷಣವು ಅನಿವಾರ್ಯವಾಗುವಂತೆ ಮಾಡಿತು. ಹೀಗಾಗಿ ದೊಡ್ಡ ಪ್ರಮಾಣದ ಜನರು ಇದರಲ್ಲಿ ಭಾಗಿಯಾದರು. ಮೊದಲಿಗಿಂತಲೂ ಹೆಚ್ಚು ಮಕ್ಕಳು ಶಾಲೆಯಲ್ಲಿ ಇರುವಂತಾಯಿತು (ಈಗ ಅನೇಕರು). ಸಮಾಜದಲ್ಲಿ ಹೆಚ್ಚಾಗುತ್ತಿದ್ದ ಸಂಕೀರ್ಣತೆಗಳು, ಉತ್ಪಾದನೆ ಮತ್ತು ನಿರ್ವಹಣೆಗಾಗಿ ಅಗತ್ಯವಿರುವ ಕೌಶಲ್ಯಗಳು (ಮತ್ತು ಈಗ ಬೇಡಿಕೆಗಳು) ಹೆಚ್ಚಿನ ಸಂಖ್ಯೆಯ ವ್ಯಕ್ತಿಗಳನ್ನು ಮತ್ತು ವೈವಿಧ್ಯಮಯ ಕೌಶಲ್ಯಗಳನ್ನು ಹೊಂದಿರುವವರ ಬೇಡಿಕೆಯನ್ನು ಹೆಚ್ಚಿಸಿತು. ಕರಕುಶಲಕರ್ಮಿಗಳ ಪೈಕಿ ಹಲವರು, ಆರ್ಥಿಕತೆಗೆ ನಿರ್ಣಾಯಕವಾದ ನಿರ್ದಿಷ್ಟ ಶಿಕ್ಷಣ ಮತ್ತು ಕೌಶಲ್ಯಗಳು ಅನಿವಾರ್ಯವಾಗಿರುವ ಹಲವರ ಅಗತ್ಯವೂ ಬೇಕಾಯಿತು. ಉತ್ಪಾದನಾ ಸಾಧನಗಳು ಮತ್ತು ಮಾರುಕಟ್ಟೆಯ ಸ್ವರೂಪದಲ್ಲಿ ಬದಲಾವಣೆ ಬಂದ ನಂತರ ಸ್ವಲ್ಪ ಚಲನಶೀಲತೆ ಕಂಡು ಬಂದಿತು. ಇದು ಹೊಸ ಮೇಲ್ವರ್ಗದವರ ಸೃಷ್ಟಿಗೆ ಕಾರಣವಾಯಿತು ಮತ್ತು ಅವರು ಬೆರೆಯುವುದಕ್ಕೆ ಎಡೆಮಾಡಿಕೊಟ್ಟಿತು. ಈ ಮೇಲ್ವರ್ಗದವರು ಕೂಡಾ ನಾಯಕತ್ವದಲ್ಲಿ ಪಾಲುದಾರಿಕೆ ಹಾಗೂ ಆರ್ಥಿಕ ಲಾಭಗಳನ್ನು ಹಂಚಿಕೊಳ್ಳಬೇಕೆಂದು ಬಯಸಿದ್ದರು.

ಬೆಳೆಯುತ್ತಿರುವ ಆರ್ಥಿಕತೆ ಹಾಗೂ ತಂತ್ರಜ್ಞಾನ ಮತ್ತು ಈ ಹೋರಾಟಗಳು ಸಮಾಜದಲ್ಲಿ ಅವಕಾಶ, ಆಯ್ಕೆ ಮತ್ತು ಪ್ರತ್ಯೇಕತೆಯ ಕ್ರಮಕ್ಕೆ 'ಪ್ರತಿಭೆ'ಯನ್ನು (Meritocracy) ಪ್ರಮುಖ ಮಾನದಂಡವಾಗಿ ತಂದಿತು. ಇದು ಸಹಬಾಳ್ವೆಯ ಪ್ರಜಾಪ್ರಭುತ್ವ ಮತ್ತು ಕಲ್ಯಾಣದ ಕಲ್ಪನೆಗಳೊಂದಿಗೆ ತೊಡಗಿಸಿಕೊಳ್ಳಬೇಕಾಯಿತು. ಇದರ ಪರಿಣಾಮವಾಗಿ ಇನ್ನೂ ಕೂಡ ವಿವಿಧ ರೀತಿಯ ಶಿಕ್ಷಣದಲ್ಲಿ ಪ್ರತ್ಯೇಕತೆ ಮತ್ತು ದೊಡ್ಡ ಪ್ರಮಾಣದ ಜನಸಂಖ್ಯೆಗೆ ಶಿಕ್ಷಣ ಹಾಗೂ ವೈವಿಧ್ಯಮಯ ಮಕ್ಕಳ ಗುಂಪಿಗೆ ಶಿಕ್ಷಣ ಎಂಬ ಹಂದರಗಳ ನಡುವೆ ಹುದುಗಿದ ಉದ್ವಿಗ್ನತೆಯು ಮುಂದುವರೆದಿದೆ. 20ನೇ ಶತಮಾನದ ಪೂರ್ವಾರ್ಧದ ಅನುಭವಗಳ ನಂತರ ಪ್ರಜಾಪ್ರಭುತ್ವದ ಪರಿಕಲ್ಪನೆ ಮತ್ತು ರಾಜ್ಯದ ಕಲ್ಯಾಣ ಪಾತ್ರದ ಪರಿಕಲ್ಪನೆ ಬೆಳೆಯಿತು. ತನ್ಮೂಲಕ ಪ್ರತಿಯೊಬ್ಬ ಮಗುವಿಗೆ ಔಪಚಾರಿಕವಾಗಿ ಶಿಕ್ಷಣ ನೀಡುವ ಅಗತ್ಯ ಮತ್ತು ಶಿಕ್ಷಣದ ಉದ್ದೇಶ ಮತ್ತು ಸ್ವರೂಪದ ಬಗ್ಗೆ ಕಾಳಜಿಯೂ ಬೆಳೆಯಿತು. ಸಾಮಾಜಿಕ ಶ್ರೇಣಿಗಳಲ್ಲಿ ಯಥಾಸ್ಥಿತಿ ನಿರ್ವಹಣೆ ಹಾಗೂ ಸಾಮಾನ್ಯ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಎಲ್ಲರನ್ನೂ ಒಳಗೊಳ್ಳುವುದರ ನಡುವೆ ಸಂಘರ್ಷವು ಭಾರತೀಯ ಸಂವಿಧಾನದಲ್ಲಿ ಪ್ರತಿಬಿಂಬಿತವಾಯಿತು. ಸಂವಿಧಾನದ ಪ್ರಸ್ತಾವನೆಯು ಒಂದು ಬದ್ಧತೆಯನ್ನು ವಿಶದಪಡಿಸಿತು. ಇದು ಆಡಳಿತಗಾರರಿಗೆ ಸಾಧಿಸಲು, ಸ್ವೀಕರಿಸಲು ಮತ್ತು ನಂಬಲು ಕಷ್ಟವಾಗಿತ್ತು.

1986ರ ಶಿಕ್ಷಣ ನೀತಿಯು ಉದ್ವಿಗ್ನತೆಯನ್ನು ಮುನ್ನೆಲೆಗೆ ತಂದಿತು ಮತ್ತು ಶಿಕ್ಷಣವನ್ನು ಮಾನವ ಸಂಪನ್ಮೂಲ ಅಭಿವೃದ್ಧಿಯಾಗಿ (Human resource development) ವ್ಯಾಖ್ಯಾನಿಸುವ ಮೂಲಕ ನೈಜ ಉದ್ದೇಶವನ್ನು, ಚಾಲ್ತಿಯಲ್ಲಿರುವ ನೀತಿ ಮತ್ತು ಸಾರ್ವಜನಿಕ ನಂಬಿಕೆಯನ್ನು ಕೇಂದ್ರೀಕರಿಸಿತು. ಇದನ್ನು ನಿರೂಪಿಸಲು ಪದಗಳ ಆಯ್ಕೆ ಸುಸ್ಪಷ್ಟವಾಗಿತ್ತು: ದೇಶದ ಅಭಿವೃದ್ಧಿಗೆ (ಇದನ್ನು ಆರ್ಥಿಕತೆ ಮತ್ತು ಮಾರುಕಟ್ಟೆಯೆಂದು ಓದತಕ್ಕದ್ದು) ಪೂರಕವಾಗಿ ಕೊಡುಗೆ ನೀಡುವ ಮನುಷ್ಯರು ಕೂಡಾ, 'ಸಂಪನ್ಮೂಲ' (Resource)ವೇ ಆಗಿದ್ದಾರೆ. ಪ್ರತಿಯೊಬ್ಬನೂ ಒಬ್ಬ ಪ್ರತ್ಯೇಕ ವ್ಯಕ್ತಿಯಾಗಿದ್ದು, ಆರ್ಥಿಕತೆ ಮತ್ತು ಮಾರುಕಟ್ಟೆಯ ಗುರಿಯು ವಿತರಣೆಯ ಸಮಾನತೆಗಾಗಿ ಯಾವುದೇ ಕಾಳಜಿಯಿಲ್ಲದೆ ಬಳಕೆಯನ್ನು ಗರಿಷ್ಠ–ಗೊಳಿಸುವುದಾಗಿದೆ. ಗರಿಷ್ಠ ವೈಯಕ್ತಿಕ ಸಂತೋಷ, ಸ್ವಾಧೀನ ಮತ್ತು ವಸ್ತುಗಳ ಅನುಭೋಗಕ್ಕಾಗಿ ಸಾಧ್ಯತೆಗಳನ್ನು ರೂಪಿಸಲು ಖಾಸಗಿ ಅಗತ್ಯಗಳ ಮೇಲೆ ಕೇಂದ್ರೀಕರಿಸುವುದು ಇದರ ನೀತಿಯಾಗಿದೆ. ವ್ಯಕ್ತಿಗಳಿಗೆ ಯಾವುದೇ ಸಾಮಾಜಿಕ ಜವಾಬ್ದಾರಿಯಿಲ್ಲದೆ, ಶಿಕ್ಷಣದ ಹೂಡಿಕೆಯಲ್ಲಿ ಕೊರತೆಯಿರುವುದರಿಂದಲೇ ಮೂಲ ಅವಶ್ಯಕತೆಗಳನ್ನೂ ಹೊಂದಿಲ್ಲದ ಕಾರಣ ಆ ಸ್ಥಿತಿಯಲ್ಲಿದ್ದಾರೆ ಎನ್ನುವುದು ಇಲ್ಲಿನ ಒಪ್ಪಿತ ತತ್ವವಾಗಿದೆ.. (ಅಂದರೆ ತಮ್ಮ ಸ್ವಂತ ಪ್ರಯತ್ನದ ದೃಷ್ಟಿಯಿಂದ ಮತ್ತು ತಮ್ಮ ಪೋಷಕರ/ ಹೆತ್ತವರ ಬದ್ಧತೆ, ಶ್ರಮ ಮತ್ತು ತಮ್ಮ ಶಿಕ್ಷಣದ ಕೊಡುಗೆಗೆ ಸಂಬಂಧಿಸಿದಂತೆ). ಹೀಗಾಗಿ, ಇಂಥ ಆರ್ಥಿಕತೆಯು, ಶೈಕ್ಷಣಿಕ ಉದ್ದೇಶಗಳು ಮತ್ತು ಚಟುವಟಿಕೆಗಳು ಮಾರುಕಟ್ಟೆಯ ವಿಶ್ಲೇಷಣೆಗಳಿಂದ ಹೆಚ್ಚಾಗಿ ನಿರ್ಧರಿತವಾಗಿದ್ದು, ಮಾರುಕಟ್ಟೆ ಬೆಳೆಯಲು ಇಂಥ ತಾಂತ್ರಿಕ ಪರಿಗಣನೆಗಳು ನೆರವಾಗುವವೇ ಹೊರತು ಯಾವುದೇ ಇತರ ನೈತಿಕ ಅಥವಾ ನೀತಿ ಸೂತ್ರಗಳಲ್ಲ ಎಂಬುದನ್ನು ಮಾನವ ಬಂಡವಾಳ ಸಿದ್ಧಾಂತದಿಂದ (Human Capital Theory) ಪ್ರೇರಿತವಾದ ಈ ವಿಚಾರವು ಸೂಚಿಸುತ್ತದೆ.

ತಾತ್ವಿಕ ಗಟ್ಟಿತನಕ್ಕೆ ನಂಬಿಕೆಯ ಕೊರತೆಯಿರುವುದೇ ಔಪಚಾರಿಕವಾದ ಉತ್ತಮ ಗುಣಮಟ್ಟದ ಶಿಕ್ಷಣ ಕಾರ್ಯಕ್ರಮಗಳಲ್ಲಿ ಇಂದು ಎಲ್ಲಾ ಮಕ್ಕಳನ್ನು ಒಳಗೊಳ್ಳುವುದಕ್ಕಿರುವ ಮೂಲಭೂತ ಸವಾಲಾಗಿದೆ. ಸಂವಿಧಾನದ ಪ್ರಸ್ತಾವನೆಯಲ್ಲಿರುವ ಭರವಸೆಯನ್ನು ಅರ್ಥಮಾಡಿಕೊಡಲಿಲ್ಲ ಅಥವಾ ಅಂಗೀಕರಿಸಿಲ್ಲ. ಅವಕಾಶ, ಸೌಲಭ್ಯ, ಆಯ್ಕೆ ಮತ್ತು ಬೆಳವಣಿಗೆಗೆ ಆಯ್ಕೆಗಳು ಮಕ್ಕಳಿಗೆ ಸಿಗುವುದನ್ನು ಖಚಿತಪಡಿಸಿಕೊಳ್ಳದೆ ಹೋಲಿಸಬಹುದಾದ ಅಲ್ಪ ಮಟ್ಟದಲ್ಲಾದರೂ ಎಲ್ಲಾ ಮಕ್ಕಳಿಗೂ ಸಿಗುವಂತೆ ಮಾಡದೆ ಅವಕಾಶದ ಸಮಾನತೆಯನ್ನು ಅಪೇಕ್ಷಿಸುವ ಸಮನ್ವಯವನ್ನು ಸಾಧಿಸಲಾಗದೆಂಬುದು ಸುಸ್ಪಷ್ಟವಾಗಿದೆ.

ಈ ಪ್ರಕ್ರಿಯೆಗೆ ಎಲ್ಲಾ ಮಕ್ಕಳು ಕಲಿಯಬಹುದು ಮತ್ತು ಅವರಿಗೆ ಸಮಾನ ಆದ್ಯತೆ ಮತ್ತು ಕಾಳಜಿಯ ಅಗತ್ಯವಿರುತ್ತದೆ ಎಂಬ ನಂಬಿಕೆಯ ಅಗತ್ಯವಿದೆ. ಪ್ರತಿಯೊಂದು ಮಗುವಿಗೂ ಅರಿವು, ಸಾಧ್ಯತೆ ಮತ್ತು ತನ್ನದೇ ಹಾದಿಯನ್ನು ಆಯ್ಕೆ ಮಾಡಿಕೊಳ್ಳುವ ಸಾಮರ್ಥ್ಯವನ್ನು ನೀಡುವ ಮತ್ತು ತಾನು ಏನಾಗಬೇಕೆಂದು ಬಯಸುವ ಅವಕಾಶವನ್ನು ಒದಗಿಸಬೇಕೆಂಬುದು ಶಿಕ್ಷಣದಿಂದ ಮಾನವ ಸಾಮರ್ಥ್ಯದ ಸಿದ್ಧಾಂತದ ನಿರೀಕ್ಷೆಯಾಗಿದೆ. ಇದಕ್ಕೆ ವಿರುದ್ಧವಾಗಿ, ಶಿಕ್ಷಣ ವ್ಯವಸ್ಥೆಯನ್ನು ರೂಪಿಸಿರುವ ಚಾಲ್ತಿಯಲ್ಲಿರುವ ತತ್ವಗಳು, ಒಂದು ಮಗುವನ್ನು ಮಾನವ ಬಂಡವಾಳವನ್ನು ಸೃಷ್ಟಿಸುವ ಸಂಪತ್ತಿನ ಒಂದು ಭಾಗವಾಗಿ ಬೆಳೆಸುತ್ತದೆ ಮತ್ತು ಮಾರುಕಟ್ಟೆಯಲ್ಲಿ ವಿನಿಮಯವನ್ನು ಬೆಳೆಸುವ ಆದಾಯ ಉತ್ಪಾದಕ ಎಂದು ಭಾವಿಸುತ್ತವೆ. ಈ ಸೂತ್ರವು ಶಿಕ್ಷಣದ ಮೇಲಿನ ಎಲ್ಲಾ ವೆಚ್ಚವನ್ನು ಆರ್ಥಿಕ ಹೂಡಿಕೆಯೆಂದು ಪರಿಗಣಿಸುತ್ತದೆ ಮತ್ತು ಆರ್ಥಿಕ ಉತ್ಪನ್ನದ ಬೆಳವಣಿಗೆಯ ನಿಟ್ಟಿನಲ್ಲಿ ಹೂಡಿಕೆಯಿಂದ ಲಾಭವನ್ನು ಬಯಸುತ್ತದೆ.

ಉದ್ಯೋಗಗಳ ಸಂಖ್ಯೆಯ ವಿಸ್ತರಣೆಯ ಸಾಧ್ಯತೆ ಮತ್ತು ಮೇಲ್ಮುಖ ಚಲನಶೀಲತೆ ಕಡಿಮೆಯಾಗಿರುವ ಈ ಸಂದರ್ಭದಲ್ಲಿ ಹೆಚ್ಚಿನ ಜನರಿಗೆ ಶಿಕ್ಷಣ ದೊರಕುವ ಸಾಧ್ಯತೆಗೆ ಅಪಾಯ ಉಂಟಾಗಿದೆ. ಶಿಕ್ಷಣವು ಹೆಚ್ಚುಹೆಚ್ಚು ಸಂಕುಚಿತವಾಗುತ್ತಿದೆ. ಬಹಳಷ್ಟು ಮಕ್ಕಳನ್ನು ಶಿಕ್ಷಣದ ಪರಿಧಿಯಿಂದ ಹೊರಗಿಡಲಾಗುತ್ತಿದೆ. ಇದೇ ಅದರ ಕಾರ್ಯಾಚರಣೆಯ ಉದ್ದೇಶವಾಗಿದ್ದು, ಇದಕ್ಕೆ ತಕ್ಕಂತೆ ಅದರ ಉದ್ದೇಶ ಮತ್ತು ಲಭ್ಯತೆಯನ್ನು ಹೊಂದಿಸಲಾಗಿದೆ. ಆದ್ದರಿಂದ ಇಂದು ಉತ್ತಮ ಗುಣಮಟ್ಟದ ಶಿಕ್ಷಣವು ಹೆಚ್ಚು ಪ್ರತ್ಯೇಕವಾಗಿ ಸೀಮಿತವಾಗಿದೆ ಮತ್ತು ಹೆಚ್ಚುಹೆಚ್ಚು ವಿಶೇಷ ನೈಪುಣ್ಯತೆಯನ್ನು ಒಳಗೊಂಡು ಮೇಲ್ವರ್ಗಕ್ಕೆ ಮಾತ್ರ ಕೈಗೆಟಕುವ ದುಬಾರಿ ಅವಕಾಶವಾಗಿ ತೆರೆದಿಡುತ್ತಿದೆ. ಪರಿಕಲ್ಪನಾ ದಸ್ತಾವೇಜುಗಳು ಮತ್ತು ಘೋಷಿತ ಉದ್ದೇಶಗಳು ಸಂವಿಧಾನದ ಪ್ರಸ್ತಾವನೆಯ ಆಶಯ ಹಾಗೂ ಸಾಮರ್ಥ್ಯ ಸಿದ್ಧಾಂತದ ಸೂಕ್ಷ್ಮ ಎಳೆಗಳಿಗೆ ಹತ್ತಿರವಿದ್ದಂತಿದ್ದರೂ ವಾಸ್ತವದಲ್ಲಿ ಶಿಕ್ಷಣವು ಸಂಕುಚಿತತೆಯನ್ನು ಹೊಂದಿ, ಹಕ್ಕುಗಳ ಚೌಕಟ್ಟು ಕೂಡ ಮಾನವ ಬಂಡವಾಳ ಸಿದ್ಧಾಂತದ ಜೊತೆಗೆ ಬಹುತೇಕವಾಗಿ ತಳುಕು ಹಾಕಿಕೊಂಡಿರುತ್ತದೆ.

ಉಲ್ಲೇಖಗಳು

Amartya Sen's Capability Approach and Social Justice in Education Edited by Melanie Walker and Elaine Unterhalter Palgrave Macmillan 2007 Chapter 1, 2 and 3

Baptiste I (2001) Educating Lone Wolves: Pedagogical Implications of Human Capital Theory First Published May 1, 2001 Research Article https://doi.org/10.1177/074171360105100302

Behar Anurag, Learning Curve Issue 25, Page 2.

Chapter 2, Education – Meaning-origins, History and philosophy of education.

Dewan H K. Learning Curve Issue 25, Page 17

History of Education – Wikipedia, Accessed 1/19/20 5:26 PM. Indian Sub-continent, China, Greece and Rome, Formal education in the Middle ages (500 – 1500 AD). https://en.wikipedia.org/wiki/

Nussbaum M C, (2011) Creating Capabilities: The Human Development Approach, Martha C Nussbaum, The Benklap Press of Harvard University Press, Cambridge, Massachusetts and London England, 2011

Stanford Encyclopedia of Philosophy

The Capability Approach. First published Thu Apr 14, 2011; substantive revision Mon Oct 3, 2016 https://plato.stanford.edu/entries/capability-approach/

The origins of the world's first school – steemit.com

Tomassello M. (2014) A natural history of Human Thinking, Harvard University press, 2014

Tomassello M. (1999) The Cultural Origins of Human Cognition, Harvard University Press, 1999



ಹೃದಯಕಾಂತ್ ದಿವಾನ್ ಅವರು ಪ್ರಸ್ತುತ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಅನುವಾದ ಉಪಕ್ರಮಗಳಲ್ಲಿ ಕಾರ್ಯ–ನಿರ್ವಹಿಸುತ್ತಿದ್ದಾರೆ. ಅವರು 'ಏಕಲವ್ಯ'ದ ಸ್ಥಾಪಕ ತಂಡದ ಸದಸ್ಯರು ಮತ್ತು ಉದಯಪುರದ ವಿದ್ಯಾಭವನ ಸೊಸೈಟಿಯ ಶೈಕ್ಷಣಿಕ ಸಲಹೆಗಾರರಾಗಿದ್ದಾರೆ. ಅವರು 40 ವರ್ಷಗಳಿಂತಲೂ ಹೆಚ್ಚು ಕಾಲದಿಂದ ಶಿಕ್ಷಣ ಕ್ಷೇತ್ರದ ಬೇರೆಬೇರೆ ಉಪಕ್ರಮಗಳಲ್ಲಿ ಸಕ್ರಿಯರಾಗಿದ್ದಾರೆ. ನಿರ್ದಿಷ್ಟವಾಗಿ ಅವರು ಶೈಕ್ಷಣಿಕ ಸಂಶೋಧನೆ ಮತ್ತು ರಾಜ್ಯ ಶೈಕ್ಷಣಿಕ ಸಂರಚನೆಗಳ ಬದಲಾವಣೆಯ ಪ್ರಯತ್ನಗಳಲ್ಲಿ ಭಾಗಿಯಾಗಿದ್ದಾರೆ. ಅವರನ್ನು hardy@azimpremjifoundaton.orgನಲ್ಲಿ ಸಂಪರ್ಕಿಸಬಹುದು.

ಅನುವಾದ: **ಹೇಮಾದೇವಿ ಬಿ ಎನ್** । ಪರಿಶೀಲನೆ: **ಲತಾ ಕೆ ಸಿ**